

ತೋತಾಪುರಿ ಚಿತ್ರದಲ್ಲಿ ಜಗ್ಗೇಶ್ ಮತ್ತು ಅದಿತಿ ಪ್ರಭುದೇವ

ಈ ಸಿನಿಮಾದ ಇಡೀ ಕಥೆ ನಡೆಯುವುದು ಶ್ರೀರಂಗಪಟ್ಟಣ ಮತ್ತು ಮೈಸೂರು ಭಾಗದಲ್ಲಿ. ಹಾಗಾಗಿ ನಮಗೆ ಆ ಪ್ರಾಂತ್ಯದ ಭಾಷೆಯನ್ನು ಸುಲಲಿತವಾಗಿ ಆಡಬಲ್ಲ ನಾಯಕಿ ಬೇಕಾಗಿತ್ತು. ಕಲಾವಿದರಿಗೆ ಭಾಷೆಯ ಗಡಿ ಇಲ್ಲ ನಿಜ; ಆದರೆ ಅವರಿಗೆ ಯಾವುದೇ ಭಾಷೆಯನ್ನು ಬಿಡಿ ಬಿಡಿಯಾಗಿ ಹೇಳುವಷ್ಟು ಭಾಷೆಯ ಮೇಲೆ ಹಿಡಿತ ಇರಬೇಕಲ್ಲವೇ? ಹಾಗಾಗಿ ಅದಿತಿ ಪ್ರಭುದೇವ ಅವರ ಸ್ಕ್ರೀನ್‌ಟೆಸ್ಟ್ ಮಾಡಿ, ಸಂಭಾಷಣೆಗಳನ್ನು ಹೇಳಿಸಿ ನೋಡಿದೆವು. ಅವರದ್ದು ಈ ಚಿತ್ರದಲ್ಲಿ ಮುಸ್ಲಿಮ್ ಕುಟುಂಬದ ಹೆಣ್ಣುಮಗಳ ಪಾತ್ರ. ನೋಟದಲ್ಲಿಯೂ ಮಾತಿನಲ್ಲಿಯೂ ಅವರು ಈ ಪಾತ್ರಕ್ಕೆ ಸೂಕ್ತ ಅನಿಸಿ ಆಯ್ಕೆ ಮಾಡಿದೆವು. ದತ್ತಣ್ಣ ಅವಳ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

* ಜಗ್ಗೇಶ್ ಜೊತೆಗಿನ ಕಾಂಬಿನೇಷನ್ ಎರಡನೇ ಸಿನಿಮಾ. ಅನುಭವ ಹೇಗಿತ್ತು?

'ನೀರ್‌ದೋಸೆ' ಸಿನಿಮಾದಲ್ಲಿ ಕೆಲಸ ಮಾಡಿರುವುದರಿಂದ ಈ ಚಿತ್ರದಲ್ಲಿ ಕೆಲಸ ಮಾಡುವುದು ತುಂಬ ಸುಲಭ ಆಯ್ತು. ಅವರ ಕಾಮಿಡಿ ಸೆನ್ಸ್ ಹೇಗಿದೆ, ಅವರನ್ನು ಎಷ್ಟು ಕಂಟ್ರೋಲ್ ಮಾಡಿದರೆ ಅವರೊಳಗಿನ ನಟನನ್ನು ಸಮರ್ಥವಾಗಿ ಬಳಸಿಕೊಳ್ಳಬಹುದು ಎಂಬುದು ನನಗೆ ಹಿಂದಿನ ಸಿನಿಮಾದಲ್ಲಿಯೇ ಗೊತ್ತಾಗಿತ್ತು. ಹಾಗಾಗಿ ಯಾವುದೇ ಅಡಚಣೆ ಇಲ್ಲದೇ 'ತೋತಾಪುರಿ'ಯಲ್ಲಿ ಕೆಲಸ ಮಾಡಿದೆವು. ಈ ಚಿತ್ರದಲ್ಲಿ ಅವರು ತುಂಬ ಬೇರೆ ಬೇರೆ ಸ್ತರದಲ್ಲಿ ಅಭಿನಯಿಸಿದ್ದಾರೆ.

ನಾನು ಮತ್ತೆ 'ನೀರ್‌ದೋಸೆ' ನಿರ್ಮಾಪಕರು ಆ ಸಿನಿಮಾ ಬಗ್ಗೆ ಮಾತಾಡಲು ಅವರ ಮನೆಗೆ ಹೋದಾಗ ನಮ್ಮಿಬ್ಬರಿಗೂ ಒಂದೊಂದು ಸಾವಿರ ರೂಪಾಯಿ ನೋಟನ್ನು (ಆಗ ಚಾಲ್ತಿಯಲ್ಲಿತ್ತು) ರಾಘವೇಂದ್ರಸ್ವಾಮಿಗಳ ಫೋಟೊದ ಎದುರು ಇಟ್ಟು ಕೊಟ್ಟಿದ್ದರು. ನಾನದನ್ನು ಇವತ್ತೂ ಕಟ್ಟು ಹಾಕಿಸಿ ಆಫೀಸಲ್ಲಿ ಇಟ್ಟುಕೊಂಡಿದ್ದೇನೆ.

'ತೋತಾಪುರಿ' ಸಿನಿಮಾ ಬಗ್ಗೆ ಮಾತಾಡಲು ಹೋದಾಗಲೂ ಅಷ್ಟೇ, 'ನಿಮ್ಮತ್ರ ನಾನು ಸಾಯೋವರೆಗೂ ಪಾತ್ರ ಏನು, ಕಥೆ ಏನು ಅಂತ ಕೇಳಲ್ಲ. ಬಂದು ಅಭಿನಯಿಸ್ತೀನಿ' ಎಂದು ಹೇಳಿದರು. ಅವತ್ತೂ ಹೊಸ ಐನೂರು ರೂಪಾಯಿಗಳ ಐದು ನೋಟು ಕೊಟ್ರು. ಅವುಗಳನ್ನೂ ಫ್ರೇಮ್ ಹಾಕಿಸಿ ಇಟ್ಟುಕೊಂಡಿದ್ದೇನೆ. ನಮ್ಮ ವಿಶ್ವಾಸ ಹೀಗಿದೆ. ಈ ಭರವಸೆಯಲ್ಲಿಯೇ ಸಿನಿಮಾ ಮಾಡಿದ್ದೇವೆ.

◆ ನೀನಾಸಮ್ ಸತೀಶ್ ಜೊತೆಗೆ 'ಲೇಡೀಸ್ ಟೈಲರ್' ಸಿನಿಮಾ ಮಾಡುವ ಯೋಜನೆ ಎಲ್ಲಿಗೆ ಬಂತು?

ಆ ಸಿನಿಮಾ ಬರುತ್ತೆ. ಮೊದಲು ಅದನ್ನು ಪೆಟ್ರೋಮ್ಯಾಕ್ಸ್ ಎಂಬ ಹೆಸರಿನಲ್ಲಿ ಮಾಡಬೇಕು ಎಂದುಕೊಂಡಿದ್ದೆವು. ಆಮೇಲೆ 'ಲೇಡೀಸ್ ಟೈಲರ್' ಹೆಸರಿನಲ್ಲಿ ಮಾಡಬೇಕು ಅಂದುಕೊಂಡೆವು. ಅದಾಗಲಿಲ್ಲ. ಹೆಸರು, ಮತ್ತೆ ಒಂದಿಷ್ಟು ಕಥೆಯ ಬದಲಾವಣೆಯೊಂದಿಗೆ ಮಾಡುತ್ತೇವೆ. 'ತೋತಾಪುರಿ' ಸಿನಿಮಾ ನಂತರ 'ಪರಿಮಳ ಲಾಡ್ಜ್' ಸಿನಿಮಾ ಮಾಡ್ತಿದೀವಿ. ಅದರಲ್ಲಿ ನೀನಾಸಮ್ ಸತೀಶ್, ಯೋಗಿ, ಸುಮನ್ ರಂಗನಾಥ್, ದತ್ತಣ್ಣ ಎಲ್ಲ ಅಭಿನಯಿಸುತ್ತಿದ್ದಾರೆ. ಆ ಸಿನಿಮಾ ಆದಮೇಲೆ ಮುಂದಿನ ಸಿನಿಮಾ ಮಾಡ್ತೀವಿ.

■

# ಇದು ಲಾಕ್‌ಡೌನ್ ಸಿನಿಮಾ ಗುರು!

'ಮಠ', 'ಎದ್ದೇಳು ಮಂಜುನಾಥ'ಗಳಂಥ ಸಿನಿಮಾಗಳಿಂದಷ್ಟೇ ಅಲ್ಲ, ತಮ್ಮ ಜಗಳಗಂಟತನದಿಂದಲೂ ಹೆಸರಾದವರು ನಿರ್ದೇಶಕ ಗುರುಪ್ರಸಾದ್. ಎಲ್ಲಿಯೋ ಭೂಗತರಾಗಿದ್ದು ಆಗಾಗ ದಿಗ್ಗನೇ ಉದ್ಭವವಾಗಿ ಏನೋ ಒಂದಿಷ್ಟು ಸುದ್ದಿ ಕೊಟ್ಟು ಮತ್ತೆ ಮಾಯವಾಗಿಬಿಡುವ ಇವರು ಲಾಕ್‌ಡೌನ್ ಕಾಲದಲ್ಲಿ ಒಂದು ಅಚ್ಚರಿಯ ಸುದ್ದಿಯನ್ನೇ ಕೊಟ್ಟಿದ್ದಾರೆ.

ಗುರುಪ್ರಸಾದ್ ಸಿನಿಮಾ ಮಾಡ್ತಿದ್ದಾರಂತೆ! ಕೊರೊನಾ ಲಾಕ್‌ಡೌನ್ ಸಿನಿಮಾ ಮಾಡುವ ಪ್ರಯತ್ನಗಳನ್ನೆಲ್ಲ ಹೆಡೆಮುರಿ ಕಟ್ಟಿ ಮನೆಯೊಳಕ್ಕೆ ಎಸೆದಿದೆ. ಆದರೆ ಗುರು ಮನೆಯೊಳಗೇ ಇರಬೇಕಾದ ಸಮಯದಲ್ಲಿಯೂ ಸುಮ್ಮನೆ ಕೂತಿಲ್ಲ. ಲಾಕ್‌ಡೌನ್ ಟೈಮಲ್ಲಿ ಎಂಥ ಸಿನಿಮಾ ಮಾಡುವುದು? ಲಾಕ್‌ಡೌನ್ ಕುರಿತಾಗಿಯೇ ಸಿನಿಮಾ ಮಾಡಬಹುದಲ್ಲ! ಹೀಗೊಂದು ಆಲೋಚನೆ ಮನಸೊಳಗೆ ಹೊಕ್ಕಿದ್ದೇ ಪೆನ್ನು ಪಟ್ಟಿ ಹಿಡಿದು ಕೂತುಬಿಟ್ಟಿದ್ದಾರೆ. ಈಗ ಸ್ಕ್ರಿಪ್ಟ್ ಕೂಡ ರೆಡಿಯಾಗಿದೆ.

ಸಿನಿಮಾ ಅಂದರೆ ಹುಡುಗಾಟವೇ? ನಟ, ನಟಿಯರು, ತಾಂತ್ರಿಕ ತಂಡ, ಸಹಾಯಕರು, ಕ್ಯಾರಾವಾನ್ ಅದೂ ಇದೂ.... ಇವೆಲ್ಲ ಏನೂ ಇಲ್ಲ. ಗುರು ಅಂಥವರ ಪಾಲಿಗೆ ಹುಡುಗಾಟವೇ ಸಿನಿಮಾ. 'ನಾನೊಬ್ಬ ಎಂಟರ್‌ಟೈನರ್. ನನಗೆ ಜನರನ್ನು ಮನರಂಜಿಸಲು ನಟ ನಟಿಯರೇ ಬೇಕಾಗಿಲ್ಲ. ಸಿನಿಮಾ ಮಾಡಲು ಬೇಕಾಗುವ ಕ್ಯಾಮೆರಾ, ಸಂಕಲನದ ತಾಂತ್ರಿಕ ವ್ಯವಸ್ಥೆ ನನ್ನ ಬಳಿ ಇದೆ. ಇಷ್ಟು ಸಾಕು, ನಿಮ್ಮನ್ನು ಹೊಟ್ಟೆ ಹುಣ್ಣಾಗಿಸುವ ಹಾಗೆ ನಗಿಸ್ತೇನೆ ನೋಡ್ತಾ ಇರಿ' ಎನ್ನುತ್ತಿದ್ದಾರೆ ಅವರು.

ನಟರಿಲ್ಲದೇ, ಯಾವುದೇ ಸಹಾಯಕರು, ಚಿತ್ರತಂಡ ಇಲ್ಲದೇ ಮನೆಯೊಳಗೇ ಸಿನಿಮಾ ನಿರ್ಮಿಸುವ ಪ್ರಯತ್ನದಲ್ಲಿರುವ ಗುರುಪ್ರಸಾದ್, ಇದರ ಬಿಡುಗಡೆಗೂ ವಿಭಿನ್ನವಾದ ಆಲೋಚನೆ ಮಾಡಿದ್ದಾರೆ. ಆ್ಯಪ್ ಒಂದನ್ನು ರೂಪಿಸಿ, ಅದರ ಮೂಲಕ ಕನಿಷ್ಠ ಬೆಲೆಯನ್ನು ಪಾವತಿಸಿ ಸಿನಿಮಾ ನೋಡುವ ಹಾಗೆ ಮಾಡಬೇಕು ಎನ್ನುವುದು ಅವರ ಐಡಿಯಾ.

ಲಾಕ್‌ಡೌನ್ ಜಾರಿಗೆ ಬರದಿದ್ದಲ್ಲಿ ಗುರುಪ್ರಸಾದ್ ಮತ್ತು ಜಗ್ಗೇಶ್ ಕಾಂಬಿನೇಷನ್‌ನಲ್ಲಿ 'ರಂಗನಾಯಕ' ಸಿನಿಮಾ ಕೆಲಸಗಳು ಪ್ರಾರಂಭವಾಗಬೇಕಾಗಿತ್ತು. ಆ ಚಿತ್ರ ಲಾಕ್‌ಡೌನ್ ಮುಗಿದು ಜನಜೀವನ ಸಹಜಸ್ಥಿತಿಗೆ ಬಂದ ಮೇಲೆ ಶುರುವಾಗುತ್ತವಂತೆ. ಅಷ್ಟರ ಒಳಗೇ ಗುರುಪ್ರಸಾದ್, ಲಾಕ್‌ಡೌನ್ ಸಿನಿಮಾ ಮಾಡಿ ಬಿಡುಗಡೆ ಮಾಡುವ ಹವಣಿಕೆಯಲ್ಲಿದ್ದಾರೆ.

■

